ಆದ್ದರಿಂದ ಇಂತಹ ಸಮಸ್ಯೆಗಳು ಬಂದಾಗ ಅವರು ಕರೆಯಬೇಕು, ಇವರು ಅವರ ಹತ್ತಿರ ಹೋಗಬೇಕು, ಪರಿಹಾರವನ್ನು ಕಂಡುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈಗಲೂ ಕೂಡ ಅದೇ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅದು ಇನ್ನೂ ಕೂಡ progress ಆಗಿಲ್ಲ. ಅದಕ್ಕಾಗಿ ದಯವಿಟ್ಟು ಅವರು ಯಾವಾಗ ಮಾಡುತ್ತೀರೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ತಾವು ದಯಮಾಡಿ ಹೇಳಿಬಿಡಲಿ.

ಅಧ್ಯಕ್ಷರು :– ಮಾನ್ಯ ಈಶ್ವರಪ್ಪನವರೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ನಿಮ್ಮ ಅಧಿಕಾರಿಗಳನ್ನು ಕರೆದು ಆದಷ್ಟು ಬೇಗನೆ ತೀರ್ಮಾನ ಮಾಡಿ. ಆಯಿತು. ತಾವು ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಕಬಿನಿ 2 ನೇ ಹಂತದ ಭಾಗಕ್ಕೆ ಸಂಬಂಧಪಟ್ಟಂತಹ ಯಾರು ಶಾಸಕರುಗಳು ಇದ್ದಾರೋ ಅವರೆಲ್ಲರನ್ನು ಕರೆದು ವಿಶೇಷ ಸಭೆಯನ್ನು ಖಂಡಿತವಾಗಿ ಮಾಡುತ್ತೇವೆ. ಅವರಿಗೆ ಸಮಾಧಾನವಾಗುವಂತಹ ಕಾರ್ಯಕ್ರಮವನ್ನು ಕೂಡ ನಾವು ಆರಂಭ ಮಾಡುತ್ತೇವೆ.

ಅಧ್ಯಕ್ಷರು :– ಆಯಿತು. ತಾವುಗಳು ತಮ್ಮ ಜಾಗಗಳಿಗೆ ನಡೆಯಿರಿ ಸ್ವಾಮಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಆರ್. ಧ್ರುವನಾರಾಯಣ್‌ರವರುಗಳು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

<u>ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ :–</u>

115 (617) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಮಂಜೂರಾತಿ ಹಂತದಲ್ಲಿರುವ ಯೋಜನೆಗಳ ಸಂಖ್ಯೆ ಎಷ್ಟು;

ಇ) ಲಿಂಗಸಗೂರು ತಾಲ್ಲೂಕಿನ ಯರಡೋಣ ಗ್ರಾಮದ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಕ್ತಾಯಗೊಳ್ಳುವ ಅವಧಿ ಯಾವಾಗ;

ಈ) ಈ ಯೋಜನೆ ಪ್ರಾರಂಭ ಮಾಡಲು ನಿರ್ದಿಷ್ಟ ಕಾಲಾವಧಿ ತಿಳಿಸುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) :

ಅ) ರಾಯಚೂರು ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಡಿಯಲ್ಲಿ 2 ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಸದ್ಯಕ್ಕೆ ಅನುಮೋದನೆಗಾಗಿ ಯಾವುದೇ ಯೋಜನೆಗಳು ಉಳಿದಿಲ್ಲ.

ಇ) ಈ ಯೋಜನೆಯನ್ನು ಮಾರ್ಚ್-2008 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಪರಿಷ್ಕೃತ ಅಂದಾಜು ಮತ್ತು ವಿದ್ಯುದೀಕರಣ ಬಾಬ್ತಿನ ಹೆಚ್ಚುವರಿ ಮಂಜೂರಾಗಬೇಕಾಗಿದೆ ಹಾಗೂ ಕೇಂದ್ರ ಸರ್ಕಾರದಿಂದ ಅನುದಾನ ನಿರೀಕ್ಷಿಸಿದೆ. ಇದನ್ನು ಆಗಸ್ಟ್ 2007 ರಲ್ಲಿ ಪುನರಾರಂಭಿಸಿ ಮಾರ್ಚ್ 2008 ರೊಳಗೆ ಯೋಜನೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ 2 ಯೋಜನೆಗಳನ್ನು ಮಾತ್ರ ತೆಗದುಕೊಂಡಿದ್ದೇವೆ. ರಾಜೀವ್‌ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಯೋಜನೆಯಡಿಯಲ್ಲಿ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ 5 ವರ್ಷದಿಂದ ಟೆಂಡರ್‌ನ್ನು ಕರೆದಿದ್ದಾರೆ. 5 ವರ್ಷದಲ್ಲಿ ಈ ಯೋಜನೆಯನ್ನು ಮುಗಿಸುವುದಕ್ಕಾಗಲಿಲ್ಲವೆಂದರೆ, ಏನು ಆ ಯೋಜನೆಯಡಿಯಲ್ಲಿ ಬರುವಂತಹ ಗ್ರಾಮಗಳಿಗೆ ಸರ್ಕಾರ ಈಗ ಕುಡಿಯುವ ನೀರಿನ transportation ಮೂಲಕ ಅಂದರೆ ಗುತ್ತಿಗೆ ಮೂಲ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತಿನ ದಿವಸ ಅಧಿಕಾರಿಗಳು ಮನಸ್ಸು ಮಾಡಿದರೆ ಲಿಂಗಸಗೂರು ತಾಲ್ಲೂಕಿನ ಯರಡೋಣ ಗ್ರಾಮಕ್ಕೆ ಕೇವಲ ವಿದ್ಯುತ್ತನ್ನು ಪೂರೈಸಿಬಿಟ್ಟರೆ ಸಾಕು, ಅವರಿಗೆ ನೀರು ಹೋಗುವಂತಹ ವ್ಯವಸ್ಥೆಯಾಗುತ್ತದೆ. ಇಲ್ಲಿ ಕೆಳಗಿನಿಂದ ಹಿಡಿದು ಮೇಲಿನವರೆಗೆ ಬರುವಂತಹ ಅಧಿಕಾರಿಗಳು ಇಚ್ಛಾಶಕ್ತಿಯಿಲ್ಲದೇ, ಈ ಒಂದು ಯೋಜನೆ ಕುಂಠಿತಗೊಳ್ಳುವುದಕ್ಕೆ ಕಾರಣವಾಗಿದೆ. ಆ ಅಧಿಕಾರಿಗಳನ್ನು ನೇರವಾಗಿ ಹೊಣೆ ಎಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು :- ಇಲ್ಲಿ ಯಾರಿಗೆ ಇಚ್ಛಾಶಕ್ತಿ ಇರಬೇಕು. ನೌಕರರು ಎಂದರೆ ಯಾರು? ನಿಮ್ಮ ಸರ್ಕಾರ, ನಿಮ್ಮ ಪೊಲಿಟಿಕಲ್ ಲೀಡರ್‌ಶಿಪ್, ನಿಮ್ಮ ಸಚಿವರುಗಳು ಹೇಳಿದರೆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೇ? ಅವರ ಮೇಲೆ ಏನಾದರೂ ರಿಜಿಡ್ ಆಗಿ ಅಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಚಿವರು ಇದ್ದಾರೆ. ನೀವುಗಳು ಏನು ಮಾಡುತ್ತೀರೆಂದರೆ, ಇವನು ನಮ್ಮ ಜಾತಿಯವನು, ನನಗೆ ಬೇಕಾದವನು, ನಮ್ಮ ಮಾವ, ನಮ್ಮ ಭಾವ, ಅಂತ ಹೇಳಿ ಎಲ್ಲಾ ಕಡೆಗಳಲ್ಲಿ ಅಧಿಕಾರಿಗಳಿಗೆ ರಕ್ಷಣೆಯನ್ನು ನೀವು ಕೊಡುತ್ತೀರಿ. ಏನಾದರೂ ತಪ್ಪುಗಳು ಆಗಿದ್ದರೆ ಅದು ನಿಮ್ಮದು, ಏತಕ್ಕಾಗಿ ಸುಮ್ಮನೆ ಹೇಳುತ್ತೀರಿ, ಹೇಳಿ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :- ಆದಷ್ಟು ತೀವ್ರವಾಗಿ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ತಮ್ಮ ಮನಸ್ಸಿನಲ್ಲಿ ಒಂದೇ ಮುತ್ತಿನಂತಹ ಮಾತನ್ನು ಆಡಿದ್ದೀರಿ.

ಅಧ್ಯಕ್ಷರು :- ನಾನು ಇರುವ ವಿಚಾರವನ್ನು ಹೇಳುತ್ತಿದ್ದೇನೆ. ಎಲ್ಲರೂ ಕಂಡಿರುವಂತಹ ಸತ್ಯವನ್ನು ಹೇಳುತ್ತಿದ್ದೇನೆ. ಅದನ್ನು ಯಾರು ಕೂಡ ಒಪ್ಪಿಕೊಳ್ಳುವುದಕ್ಕೆ ಸಿದ್ಧರಿಲ್ಲ. ತಾವು ಹೇಳಿ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :- ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದನ್ನು ಕೇವಲ 2 ತಿಂಗಳಲ್ಲಿ ಮುಗಿಸಬಹುದು. ಇಲ್ಲಿಂದ ದುಡ್ಡು ಕೊಟ್ಟರೆ ಸಾಕು, ಅಲ್ಲಿ ಕೆಲಸವನ್ನು ಮಾಡಿಸಿಕೊಳ್ಳುವಂತಹ ಜವಾಬ್ದಾರಿಯನ್ನು ನಾವುಗಳು ತೆಗೆದುಕೊಳ್ಳುತ್ತೇವೆ. ಆದಕಾರಣ ನನ್ನ ಕ್ಷೇತ್ರದಲ್ಲಿ ಬಹಳ ಹಳ್ಳಿಗಳಿಗೆ ಕುಡಿಯುವ ನೀರನ್ನು ಲಾರಿಗಳ ಮೂಲಕವಾಗಿ transportation ಮಾಡಿಸುತ್ತಿದ್ದೇವೆ. ದಯವಿಟ್ಟು ಅವರು ಇದನ್ನು ತೀವ್ರ ಎಂದು ಪರಿಗಣಿಸಿ 2 ತಿಂಗಳಲ್ಲಿ ಹಣವನ್ನು ಬಿಡುಗಡೆ ಮಾಡಿದರೆ ಸಾಕು. ಅಲ್ಲಿ ನಮ್ಮ ಕೆಲಸಗಳು ಪೂರ್ತಿಯಾಗುತ್ತದೆ. ಅದನ್ನು ಪೂರ್ತಿ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ :- ಮಾನ್ಯ ಅಧ್ಯಕ್ಷರೆ, ಮುಂದಿನ ದಿನಗಳಲ್ಲಿ ಹಣಕ್ಕಾಗಿ ಮಂಜೂರಾತಿಯನ್ನು ಕೊಟ್ಟು ಮಾರ್ಚ್ 2008 ರೊಳಗಾಗಿ ಪೂರ್ತಿ ಕೆಸಲವನ್ನು ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು :- ಆಯಿತು.

<u>ಸುರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶೌಚಾಲಯಗಳ ನಿರ್ಮಾಣ ಕುರಿತು :-</u>

116 (1176) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರ ವ್ಯಾಪ್ತಿಯಲ್ಲಿರುವ ಎಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ;

ಆ) ಈ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಈ ಸೌಕರ್ಯಗಳನ್ನು ಒದಗಿಸಿಕೊಡಲು ಸರ್ಕಾರದ ತ್ವರಿತ ಕ್ರಮಗಳೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸುರತ್ಕಲ್ ಕ್ಷೇತ್ರ ವ್ಯಾಪ್ತಿಯಲ್ಲಿರುವ 31 ಪ್ರಾಥಮಿಕ ಮತ್ತು 25 ಪ್ರೌಢಶಾಲೆಗಳಿಗೆ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ.

ಆ) 2007-08 ನೇ ಸಾಲಿಗೆ ರಾಜ್ಯ ವಲಯ ಯೋಜನೆಯ ಪಂಚಸೌಲಭ್ಯದಡಿ ನಗರ ಪ್ರದೇಶದ ಶಾಲೆಗಳಿಗೆ ಕುಡಿಯುವ ನೀರಿನ ಮತ್ತು ಶೌಚಾಲಯ ಸೌಲಭ್ಯಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ 5.17 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ, ಸರ್ವ ಶಿಕ್ಷಾ ಅಭಿಯಾನ, ಜಿಲ್ಲಾ ಪಂಚಾಯತ್, ಸಂಪೂರ್ಣ ಸ್ವಚ್ಛತಾ ಆಂದೋಲನ ಹಾಗೂ ರಾಜ್ಯವಲಯ ಯೋಜನೆಯಡಿ, ಕುಡಿಯುವ ನೀರು ಹಾಗೂ ಶೌಚಾಲಯ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಕೃಷ್ಣ ಪಾಲೇಮಾರ್ ಜೆ. :- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಬಹಳ ಸೂಕ್ಷ್ಮವಾಗಿ ಒದಗಿಸಿದ್ದಾರೆ. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ನಮ್ಮ ಕ್ಷೇತ್ರದಲ್ಲಿ ಶೌಚಾಲಯವನ್ನು ಹಾಗೂ ಕುಡಿಯುವ ನೀರನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಆದರೆ ಯಾವುದೇ ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ